**ಓ ಎಸ್ ನಂಃ 200/2017**
**ಡಿ ಡಬ್ಲ್ಯೂ ಃ 3**

**ದಿಃ 28.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ** ವಾದಿ ಪರ ಶ್ರೀ ಟಿ ಎಸ್ ಆರ್ ವಕೀಲರಿಂದ :-

ಸರ್ವೆ ನಂ. 62/1 ಮೂಲತಃ ಎಷ್ಟು ವಿಸ್ತೀರ್ಣ ಇತ್ತು ಎಂದರೆ ಸಾಕ್ಷಿಯು 1 ಎಕರೆ 39 ಗುಂಟೆ ಜಮೀನು. ಸರ್ವೆ ನಂ. 62 ರ ಒಟ್ಟು ವಿಸ್ತೀರ್ಣ 12 ಎಕರೆ 1 ಗುಂಟೆ, ಸದರಿ ವಿಸ್ತೀರ್ಣ ದಲ್ಲಿ ಹಿಡುವಳಿ ಜಮೀನು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 62 ರಲ್ಲಿ 9 ಎಕರೆ 28 ಗುಂಟೆ ಉಳುಮೆ ಜಮೀನು ಮತ್ತು 2 ಎಕರೆ 10 ಗುಂಟೆ ಖರಾಬು ಜಮೀನು ಇದೆ ಎಂದರೆ ಸಾಕ್ಷಿ ಇರಬಹದು ಎಂದು ಸಾಕ್ಷ್ಯ ನುಡಿಯುತ್ತಾರೆ. ಸರ್ವೆ ನಂ. 62 ದಿಃ 31.03.1934 ರಂದು ಹಿಸ್ಸಾ ಪೋಡಿ ಆಗಿದೆ ಎಂದರೆ ಸಾಕ್ಷಿ ಇರಬಹುದು. ಸರ್ವೆ ನಂ. 62 ನ್ನು ಪೋಡಿ ಮಾಡಿ ಸದರಿ ಸರ್ವೆ ನಂ. ಗಳನ್ನು 3 ಭಾಗಗಳನ್ನಾಗಿ ಮಾಡಿ ಅವುಗಳನ್ನು ಕ್ರಮವಾಗಿ ಸರ್ವೆ ನಂ. 62/1, ಸರ್ವೆ ನಂ. 62/2 ಮತ್ತು ಸರ್ವೆ ನಂ. 63/3 ಎಂದರೆ ಸರಿ. ಸರ್ವೆ ನಂ. 62/1 ರಲ್ಲಿ 4 ಎಕರೆ 13 ಗುಂಟೆ ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ 2 ಎಕರೆ 12 ಗುಂಟೆ ಉಳುಮೆ ಜಮೀನು ಇದ್ದು ಮತ್ತು 2 ಎಕರೆ 1 ಗುಂಟೆ ಖರಾಬು ಜಮೀನು ಇದೆ ಎಂದರೆ ಸಾಕ್ಷಿ ಇರಬಹುದು. ಸರ್ವೆ ನಂ. 62/1 ರ 4 ಎಕರೆ 13 ಗುಂಟೆ ಜಮೀನು ಪುಟ್ಟರಂಗಯ್ಯ ಬಿನ್ ತಿಮ್ಮಯ್ಯ ರವರ ಹೆಸರಿಗೆ ನಮೂದಾಗಿದೆ ಎಂದರೆ ಸಾಕ್ಷಿ ಇರಬಹುದು. ಈ ದಾವೆಯಲ್ಲಿ ವಿವಾದಕ್ಕಿರುವ ಜಮೀನಿನ ಸರ್ವೆ ನಂ. 62/1 ಎಂದರೆ ಸರಿಯಲ್ಲ. ಸದರಿ ಸರ್ವೆ ನಂ. ನಲ್ಲಿ 1934 ನೇ ಸಾಲಿನಲ್ಲಿ ಹಿಸ್ಸಾ ಪೋಡಿ ಆದಾಗ 3 ಎಕರೆ 31 ಗುಂಟೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸದರಿ ವಿಸ್ತೀರ್ಣ ದಲ್ಲಿ 3 ಎಕರೆ 26 ಗುಂಟೆ ಉಳುಮೆ ಜಮೀನು ಇದ್ದು 5 ಗುಂಟೆ ಖರಾಬು ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ.

1934 ನೇ ಸಾಲಿನಲ್ಲಿ ಸರ್ವೆ ನಂ. 62/2 ಹಿಸ್ಸಾ ಪೋಡಿ ಆದಾಗ ಸದರಿ ಸರ್ವೆ ನಂ. ನಲ್ಲಿ 3 ಎಕರೆ 31 ಗುಂಟೆ ಜಮೀನನ್ನು ಕೆಂಪಯ್ಯ ಬಿನ್ ಪುಟ್ಟರಂಗಯ್ಯನವರ ಹೆಸರಿಗೆ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ.

1934 ನೇ ಸಾಲಿನಲ್ಲಿ ಸರ್ವೆ ನಂ. 62/3 ಹಿಸ್ಸಾ ಪೋಡಿ ಆದಾಗ ಸದರಿ ಸರ್ವೆ ನಂ. ನಲ್ಲಿ 3 ಎಕರೆ 37 ಗುಂಟೆ ಜಮೀನನ್ನು ಸಯ್ಯದ್ ಅಬ್ದುಲ್ ಖಾದರ್ ಸಾಬ್ ರವರ ಹೆಸರಿಗೆ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ 3 ಎಕರೆ 24 ಗುಂಟೆ ಉಳುಮೆ

ಜಮೀನು ಇದ್ದು 13 ಗುಂಟೆ ಖರಾಬು ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. 1934 ನೇ ಸಾಲಿನಲ್ಲಿ ಹಿಸ್ಸಾ ಪೋಡಿ ಆದಾಗ ಸರ್ವೆ ನಂ. 62/1 ರಲ್ಲಿ ಪುಟ್ಟರಂಗಯ್ಯನ ಹೆಸರಿನಲ್ಲಿ 2 ಎಕರೆ 1 ಗುಂಟೆ ಎಂದು ನಮೂದಾಗಿದ್ದರು ಸಹ ಪುಟ್ಟರಂಗಯ್ಯನವರು 1 ಎಕರೆ 39 ಗುಂಟೆ ಜಮೀನಿನ ಚಕ್ಕುಬಂದಿಯಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಪುಟ್ಟರಂಗಯ್ಯ ಬಿನ್ ತಿಮ್ಮಯ್ಯನವರು ದಿಃ 03.07.1946 ರಲ್ಲಿ ಸರ್ವೆ ನಂ. 62/1 ರಲ್ಲಿ 1 ಎಕರೆ 39 ಗುಂಟೆ ಜಮೀನನ್ನು ಮೆಹಬೂಬಿಯಮ್ಮ ಕೋಂ ಅಬ್ದುಲ್ ರಹಮಾನ್ ಸಾಬ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯಕ್ಕೆ ಸಂಬಂಧಪಟ್ಟ ವಿಚಾರ ನನಗೆ ಗೊತ್ತು. ಪುಟ್ಟರಂಗಯ್ಯ ಬಿನ್ ತಿಮ್ಮಯ್ಯನವರು ದಿಃ 03.07.1946 ರಲ್ಲಿ ಸರ್ವೆ ನಂ. 62/1 ರಲ್ಲಿ 1 ಎಕರೆ 39 ಗುಂಟೆ ಜಮೀನನ್ನು ಮೆಹಬೂಬಿಯಮ್ಮ ಕೋಂ ಅಬ್ದುಲ್ ರಹಮಾನ್ ಸಾಬ್ ರವರಿಗೆ ಮಾರಾಟ ಮಾಡಿದ್ದಾರೆ ಸದರಿ ಜಮೀನಿನಲ್ಲಿ ಯಾವುದೇ ವಿಸ್ತೀರ್ಣವನ್ನು ಉಳಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪುಟ್ಟರಂಗಯ್ಯನವರು ಸರ್ವೆ ನಂ. 62/1 ರಲ್ಲಿ 13 ಗುಂಟೆ ಜಮೀನನ್ನು ಉಳಿಸಿಕೊಂಡಿರುತ್ತಾರೆ. ಸದರಿ ವಿಚಾರವನ್ನು ತಾವು ತಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಪುಟ್ಟರಂಗಯ್ಯನವರು ಯಾವುದೇ ಜಮೀನನ್ನು ಉಳಿಸಿಕೊಂಡಿಲ್ಲದಿದ್ದರೂ ಸಹ ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. ಪುಟ್ಟರಂಗಯ್ಯನವರು ಮೆಹಬೂಬಿಯಮ್ಮ ಯವರಿಗೆ ಮಾರಾಟ ಮಾಡಿದ ಜಮೀನಿನ ಚಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ಕೆ ಆರ್ ಕೃಷ್ಣಪ್ಪ ನವರಿಗೆ ಸೇರಿದ ಕಲ್ಯಾಣ ಮಂಟಪ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಸರ್ಕಾರಿ ಜಮೀನು. ಪುಟ್ಟರಂಗಯ್ಯನವರು ಸದರಿ ಚಕ್ಕುಬಂದಿಯ ಯಾವ ಭಾಗದಲ್ಲಿ 13 ಗುಂಟೆ ಜಮೀನನ್ನು ಉಳಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮೆಹಬೂಬಿಯಮ್ಮ ಪುಟ್ಟರಂಗಯ್ಯನವರಿಂದ ಕ್ರಯಕ್ಕೆ ಪಡೆದಿರುವ ಪೂರ ವಿಸ್ತೀರ್ಣದ ಜಮೀನನ್ನು ದಿಃ 25.11.1959 ರಲ್ಲಿ ಸೈಯದ್ ರಸೂಲ್ ಬಿನ್ ಸೈಯದ್ ಹುಸೇನ್ ಸಾಬ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸೈಯದ್ ರಸೂಲ್ ರವರ ಕುಟುಂಬದಲ್ಲಿ ದಿಃ 18.06.1969 ರಲ್ಲಿ ವಿಭಾಗ ಆಗಿದೆ ಎಂದರೆ ಸರಿ. ಸೈಯದ್ ರಸೂಲ್ ಸಾಬ್ ರವರಿಗೆ ಸೈಯದ್ ಗಫಾರ್ ಸಾಬ್ , ಸೈಯದ್ ಖಾಸಿಮ್ ಸಾಬ್ ಎಂಬ ಇಬ್ಬರು ಸಹೋದರರು ಇದ್ದು ಹಾಗೂ ನಜುಮುನ್ನೀಸಾ ಎಂಬ ಸಹೋದರಿ ಇದ್ದಾರೆ ಎಂದರೆ ಸರಿ. ಸೈಯದ್ ರಸೂಲ್ ಸಾಬ್

ಹಾಗೂ ಆತನ ಸಹೋದರ ಸಹೋದರಿಯರ ನಡುವೆ ಸರ್ವೆ ನಂ. 62/1 ರ ಜಮೀನಿಗೆ ಸಂಬಂಧಪಟ್ಟಂತೆ ವಿಭಾಗ ಆಗಿದ್ದು ಸದರಿ ವಿಭಾಗದಲ್ಲಿ ಸೈಯದ್ ರಸೂಲ್ ಸಾಬ್ ರವರಿಗೆ 39 ಗುಂಟೆ, ಸೈಯದ್ ಗಫಾರ್ ಸಾಬ್ ರವರಿಗೆ 18 ಗುಂಟೆ, ಸೈಯದ್ ಖಾಸಿಮ್ ಸಾಬ್ ರವರಿಗೆ 18 ಗುಂಟೆ, ಹಾಗೂ ನಜುಮುನ್ನೀಸಾ ಎಂಬುವವರಿಗೆ 4 ಗುಂಟೆ ಜಮೀನು ಬಂದಿದೆ ಎಂದರೆ ಸರಿ. ಸೈಯದ್ ರಸೂಲ್ ಸಾಬ್ ರವರಿಗೆ ವಿಭಾಗದ ಮೂಲಕ ಬಂದಂತಹ 39 ಗುಂಟೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತು. ಸದರಿ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ರಂಗಪ್ಪನವರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸೈಯದ್ ಗಫಾರ್ ಸಾಬ್ ರವರ ಜಮೀನು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರಿದು ನಜುಮುನ್ನೀಸಾ ರವ ಜಮೀನು ಬರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಕ್ಷಿಣಕ್ಕೆ ಸರ್ಕಾರಿ ಜಮೀನು. ದಿಃ 18.06.1969 ರಲ್ಲಿ ಸೈಯದ್ ರಸೂಲ್ ಸಾಬ್ ರವರ ಕುಟುಂಬದಲ್ಲಿ ಮಾಡಿಕೊಂಡಂತಹ ವಿಭಾಗ ಪತ್ರವನ್ನು ತಾವೇನಾದರೂ ನೋಡಿದ್ದೀರ ಎಂದರೆ ಸಾಕ್ಷಿ ನೋಡಿರುತ್ತೇನೆ. ಸೈಯದ್ ರಸೂಲ್ ಸಾಬ್ ರವರ ಹಿಸ್ಸೆಗೆ ಬಂದಿರುವ ಜಮೀನಿನ ಪೂರ್ವಕ್ಕೆ ಚಕ್ಕುಬಂದಿ ನಜುಮುನ್ನೀಸ ರವರ ಜಮೀನು ಬರುವುದಿಲ್ಲ, ಸೈಯದ್ ಗಫಾರ್ ಸಾಬ್ ರವರ ಜಮೀನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸೈಯದ್ ಗಫಾರ್ ಸಾಬ್ ರವರಿಗೆ ವಿಭಾಗದ ಮೂಲಕ ಬಂದಿರುವ 18 ಗುಂಟೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸೈಯದ್ ಗಫಾರ್ ಸಾಬ್ ರವರಿಗೆ ವಿಭಾಗದ ಮೂಲಕ ಬಂದಿರುವ 18 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ರಂಗಪ್ಪ ನವರ ಜಮೀನು ಎಂದರೆ ನನಗೆ ಗೊತ್ತಿಲ್ಲ, ಪಶ್ಚಿಮಕ್ಕೆ ರಸ್ತೆಇದೆ ಎಂದರೆ ಸರಿ, ಉತ್ತರಕ್ಕೆ ಸೈಯದ್ ಖಾಸಿಮ್ ರವರ ಜಮೀನು ಎಂದರೆ ನನಗೆ ಗೊತ್ತಿಲ್ಲ, ದಕ್ಷಿಣಕ್ಕೆ ಸೈಯದ್ ರಸೂಲ್ ಸಾಬ್ ರವರ ಜಮೀನು ಎಂದರೆ ಸರಿ.

ಸೈಯದ್ ಖಾಸಿಮ್ ಸಾಬ್ ರವರ ಹಿಸ್ಸೆಗೆ ಬಂದಿರುವ 18 ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ರಂಗಪ್ಪ ನವರ ಜಮೀನು ಎಂದರೆ ಸರಿ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಸೈಯದ್ ಗಫಾರ್ ಸಾಬ್ ರವರ ಜಮೀನು ಎಂದರೆ ಸಾಕ್ಷಿ ಇರಬಹುದು ಆದರೆ ನನಗೆ ಗೊತ್ತಿಲ್ಲ. ನಜುಮುನ್ನೀಸಾ ರವರ ಹಿಸ್ಸೆಗೆ ಬಂದಿರುವ 4 ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ರಂಗಪ್ಪ ನವರ ಜಮೀನು ಎಂದರೆ ಸರಿ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ

ರಸ್ತೆ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಸೈಯದ್ ಗಫಾರ್ ಸಾಬ್ ರವರು ಆತನ ಹೆಂಡತಿ ಮತ್ತು ಮಗನನ್ನು ಬಿಟ್ಟು ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸೈಯದ್ ಗಫಾರ್ ಸಾಬ್ ರವರ ಹೆಂಡತಿಯ ಹೆಸರು ನಜುಮುನ್ನೀಸಾ ಮತ್ತು ಆತನ ಮಗನ ಹೆಸರು ಅಲ್ಲಾ ಬಕಾಷ್. ಸೈಯದ್ ಗಫಾರ್ ಸಾಬ್ ರವರ ಹೆಂಡತಿ ಮತ್ತು ಮಗ ಸೈಯದ್ ಗಫಾರ್ ಸಾಬ್ ರವರಿಗೆ ಸರ್ವೆ ನಂ. 62/1 ರಲ್ಲಿ ಬಂದಿರುವ 18 ಗುಂಟೆ ಜಮೀನಿನ ಪೈಕಿ 11.4 ಗುಂಟೆ ಜಮೀನನ್ನು ದಿಃ 01.06.1998 ನೇ ಸಾಲಿನಲ್ಲಿ ಮಹಮದ್ ಲಿಖಾಯತ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪೂರ್ವಕ್ಕೆ ರಂಗಪ್ಪನ ಜಮೀನು ಎಂದರೆ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಉತ್ತರಕ್ಕೆ ಸೈಯದ್ ಇಬ್ರಾಹಿಂ ಸಾಬ್ ರವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ಸೈಯದ್ ರಸೂಲ್ ರವರಿ ಜಮೀನು ಇದೆ ಎಂದರೆ ಸರಿ. ಸದರಿ ಚಕ್ಕುಬಂದಿಯಲ್ಲಿ ಬರುವ ಜಮೀನಿಗೂ ಹಾಗೂ ತಮಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿ. ಸದರಿ ಜಮೀನಿನಲ್ಲಿ ತಾವು ಸ್ವಾಧೀನಾನುಭವದಲ್ಲಿಲ್ಲ ಎಂದರೆ ಸರಿ. ಸರ್ವೆ ನಂ. 62/1 ರಲ್ಲಿ ಸೈಯದ್ ಗಫಾರ್ ಸಾಬ್ ರವರು ಸೈಯದ್ ಇಬ್ರಾಹಿಂ ರವರಿಗೆ ದಿಃ 01.06.1998 ಕ್ಕಿಂತ ಮುಂಚೆಯೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ಮತ್ತು 3 ರ ನಡುವೆ 11.4 ರ ಜಮೀನಿನ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಅವರ ನಡುವೆ ಒಳಒಪ್ಪಂದ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ಪ್ರತಿವಾದಿಗಳು 3 ನೇ ಪ್ರತಿವಾದಿಗೆ 11.4 ರ ಪೈಕಿ 8 ಗುಂಟೆ ವಿಸ್ತೀರ್ಣ ಜಮೀನಿಗೆ ಸಂಬಂಧಪಟ್ಟಂತೆ ದಿಃ 16.05.2007 ರಂದು 3 ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 16.09.2007 ರಲ್ಲಿ 8 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ 1 ಮತ್ತು 2 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಗೆ ಸಾಮಾನ್ಯ ಮುಕ್ತರ್ ನಾಮೆ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಡಿಸೆಂಬರ್ 2007 ನೇ ಸಾಲಿನಲ್ಲಿ 1 ಮತ್ತು 3 ನೇ ಪ್ರತಿವಾದಿಗಳು 9.12 ಗುಂಟೆ ವಿಸ್ತೀರ್ಣದ ಜಮೀನನ್ನು ಮಾರಾಟ ಮಾಡುವುದಾಗಿ ಘೋಷಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯು ಸದರಿ ಜಮೀನನ್ನು ಕೊಂಡುಕೊಳ್ಳುವುದಾಗಿ ಪ್ರತಿವಾದಿ 1 ರಿಂದ 3 ರವರಿಗೆ ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 08.12.2007 ರಲ್ಲಿ 9.12 ಗುಂಟೆ ಜಮೀನನ್ನು ರೂ. 10 ಲಕ್ಷ ಕ್ಕೆ ಮಾರಾಟ ಮಾಡುವುದಾಗಿ ನಿಗದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕದಂದು

**ಓ ಎಸ್ ನಂಃ 200/2017**

**ಡಿ ಡಬ್ಲ್ಯೂ ಃ 3**

ಪ್ರತಿವಾದಿ 1 ರಿಂದ 3 ರವರು ವಾದಿಗೆ ಒಂದು ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರು ಪತ್ರದ ಅನ್ವಯ ಪ್ರತಿವಾದಿ 1 ರಿಂದ 3 ರವರು ವಾದಿ ಹೆಸರಿಗೆ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ರಿಂದ 3 ರವರು ವಾದಿಗೆ ಕ್ರಯಪತ್ರ ಬರೆದುಕೊಡದ ಕಾರಣ ವಾದಿಯು ಪ್ರತಿವಾದಿ 1 ರಿಂದ 3 ರವರ ವಿರುದ್ಧ ಇದೇ ನ್ಯಾಯಾಲಯದಲ್ಲಿ ನಿರ್ದಿಷ್ಟ ಕರಾರು ಅನುಷ್ಠಾನಕ್ಕೆ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 09.03.2014 ರಲ್ಲಿ ಡಿಕ್ರಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಜಾರಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯವು ನಿಯೋಗಿಯ ಮುಖಾಂತರ 9 ಗುಂಟೆ ಜಮೀನಿಗೆ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಖಾಂತರ ಸದರಿ ಜಮೀನಿನ ಸ್ವಾಧೀನವನ್ನು ದಿಃ 08.08.2016 ರಂದು ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 08.08.2016 ರಿಂದ ಇಲ್ಲಿಯ ತನಕ ವಾದಿಯು 9 ಗುಂಟೆ ಜಮೀನಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಿಃ 28.12.2015 ರಲ್ಲಿ ಸರ್ವೆ ನಂ. 62/1 (ಎ) ನಲ್ಲಿ 24 ಗುಂಟೆ ಜಮೀನಲ್ಲಿ 13 ಗುಂಟೆ ಉಳುಮೆ ಜಮೀನು ಹಾಗೂ 11 ಗುಂಟೆ ಖರಾಬು ಜಮೀನನ್ನು ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ. ವಾದಪತ್ರದಲ್ಲಿ ನಮೂದು ಮಾಡಿರುವ ಚಕ್ಕುಬಂದಿಯನ್ನು ತಾವು ತಮ್ಮ ಕ್ರಯ ಪತ್ರದಲ್ಲಿ ನಮೂದು ಮಾಡಿ ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ತಾವು 28.12.2015 ರಲ್ಲಿ ಕೊಂಡುಕೊಂಡಿರುವ ಜಮೀನು ಬೇರೆ ಹಾಗೂ ವಾದಿಯ 9 ಗುಂಟೆ ಜಮೀನು ಬೇರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿ. ಸೈಯದ್ ರಸೂಲ್ ರವರಿಂದ ಕ್ರಯಕ್ಕೆ ಪಡೆದಿರುವ ಸ್ವತ್ತು ಮತ್ತು ದಾವಾ ಸ್ವತ್ತು ಬೇರೆ ಎಂದರೆ ಸರಿ. ದಾವಾ ಆಸ್ತಿಯ 9 ಗುಂಟೆ ಜಮೀನಿನಲ್ಲಿ ವಾದಿಯೇ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತಾವು 28.12.2015 ರಂದು ತಾವು ಕ್ರಯಕ್ಕೆ ಪಡೆದಿರುವ ಜಮೀನಿನ ಪೈಕಿ 5 ಗುಂಟೆ ಜಮೀನನ್ನು ದಿಃ 26.09.2016 ರಂದು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೀರಿ ಎಂದರೆ ಸರಿ. ದಿಃ 24.10.2017 ರಲ್ಲಿ 10 ನೇ ಪ್ರತಿವಾದಿಗೆ 4 1/2 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೀರಿ ಎಂದರೆ ಸರಿ. ದಿಃ 28.08.2020 ರಲ್ಲಿ 1.12 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೀರಿ ಎಂದರೆ ಸರಿ. ದಿಃ 23.04.2018 ರಲ್ಲಿ ರಾಘವೇಂದ್ರ ಎಂಬುವವರಿಗೆ 1.08 ಗುಂಟೆ ಜಮೀನನ್ನು ಮಾರಾಟ

ಓ ಎಸ್ ನಂಃ 200/2017

ಡಿ ಡಬ್ಲ್ಯೂ ಃ 3

ಮಾಡಿದ್ದೀರಿ ಎಂದರೆ ಸರಿ. ದಿಃ 23.04.2018 ರಲ್ಲಿ ಸುನೀಲ್ ಕುಮಾರ್ ಬಾಬ್ನ ರವರಿಗೆ .24 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೀರಿ ಎಂದರೆ ಸರಿ. ಸದರಿ ವಿಚಾರವನ್ನು ತಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿದ್ದೀರ ಎಂದರೆ ಸಾಕ್ಷಿ ದಾವಾ ಷೆಡ್ಯೂಲ್ ಸ್ವತ್ತಿಗೂ ಹಾಗೂ ನಮ್ಮ ಸ್ವತ್ತಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ವಾದಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯಲ್ಲಿ ವಾದಿಯ ಪರವಾಗಿ ತಾತ್ಕಾಲಿಕ ನಿರ್ಬಂದಕಾಜ್ಞೆ ಆಗಿದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**